ಅ) ಈ ಕಾಮಗಾರಿಯನ್ನು ಯಾವ ಏಜೆನ್ಸಿಯ ಮೂಲಕ ಕೈಗೊಳ್ಳಲಾಗುತ್ತಿದೆ. ಮತ್ತು ಕರಾರಿನ ಪ್ರಕಾರ ಈ ಕಾಮಗಾರಿಯನ್ನು ಯಾವ ದಿನಾಂಕದೊಳಗೆ ಮುಗಿಸಬೇಕಾಗಿತ್ತು. ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಮುಗಿಸದಿರಲು ಕಾರಣಗಳೇನು?

ಇ) ಪ್ರಸ್ತುತ ಈ ಕಾಮಗಾರಿಯ ಅಂದಾಜು ವೆಚ್ಚವನ್ನು ಪರಿಷ್ಕರಿಸಲಾಗಿದೆಯೇ ಈ ಕಾಮಗಾರಿಯು ಸಕಾಲದಲ್ಲಿ ಪೂರ್ಣವಾಗದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ತೆರವುಗೊಳಿಸಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ಈ ಕಾಮಗಾರಿಯನ್ನು 8-6-2000 ದಿಂದ ಪ್ರಾರಂಭಿಸಲಾಯಿತು. ಹಾಗೂ ಈ ಕಾಮಗಾರಿಯ ಅಂದಾಜು ವೆಚ್ಚ 175.99 ಲಕ್ಷಗಳು.

ಆ) ಈ ಕಾಮಗಾರಿಯನ್ನು ಮೆಟ್ರೋಫಲ್ಗರ್ ಹೌಸ್ (ಕವರ್ನರ್ ಸಿಮೆಂಟೇಷನ್ ಇಂಡಿಯಾ) ಕಲ್ಕತ್ತ ರವರಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದೆ. ಕರಾರಿನ ಪ್ರಕಾರ ಈ ಕಾಮಗಾರಿ 7-1-2000 ರೊಳಗೆ ಮುಗಿಯಬೇಕು.

ಇ) ಇಲ್ಲ

ಕಾಮಗಾರಿಯು ನಿಗಧಿತ ವೇಳಾ ಪಟ್ಟಿಯಂತೆ ಚಾಲನೆಯಲ್ಲಿದೆ.

ಈ) ಈ ಕಾಮಗಾರಿಯನ್ನು ಕರಾರಿನ ಪ್ರಕಾರ ನಿಗಧಿತ ವೇಳೆಯಲ್ಲಿ ಅಂದರೆ 7-1-2002 ರೊಳಗೆ ಪೂರ್ಣಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡಲಾಗುತ್ತದೆ.

ಬೆಂಗಳೂರು ನಗರದಲ್ಲಿ ಸಮೂಹ ಸಾರಿಗೆ ವ್ಯವಸ್ಥೆ

1204 (1513) ಶ್ರೀ ದಿನೇಶ್ ಗುಂಡುರಾವ್ (ಗಾಂಧೀನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸಮೂಹ ಸಾರಿಗೆ ವ್ಯವಸ್ಥೆಗಾಗಿ ಮಾರುವ ಪೆಟ್ರೋಲ್ ಮೇಲೆ ಸೆಸ್‌ನ್ನು ವಿಧಿಸಿ ಹಣ ಸಂಗ್ರಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವ ದಿನಾಂಕದಿಂದ ಈ ಸೆಸ್‌ನ್ನು ವಸೂಲಿ ಮಾಡಲಾಗುತ್ತಿದೆ.

ಇ) ಈವರೆಗೆ ಬಾಬ್ತಿನಲ್ಲಿ ಎಷ್ಟು ಹಣ ಸಂಗ್ರಹಿಸಲಾಗಿದೆ. ಸದರಿ ಹಣವನ್ನು ಯಾವ ಬ್ಯಾಂಕಿನ ಅಥವಾ ಸಂಸ್ಥೆಯಲ್ಲಿ ಇಡಲಾಗಿದೆ?

ಈ) ಸಂಗ್ರಹದ ಹಣವನ್ನು ಬಳಸಿ ಸಮೂಹ ಸಾರಿಗೆ ಯೋಜನೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

ಅ) ದಿನಾಂಕ 1.4.95 ರಿಂದ 31.3.99 ರವರೆಗೆ ಬಿ.ಎಂ. ಆರ್. ಟಿ.ಸಸ್‌ನ್ನು ಬೆಂಗಳೂರು ನಗರ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿ ಸಂಗ್ರಹಿಸಲಾಗಿದೆ.

ಆ) ದಿನಾಂಕ 1.4.95 ರಿಂದ 31.3.98 ರವರೆಗೆ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ಮೇಲೆ ಪ್ರತಿ ಲೀಟರ್‌ಗೆ ಕ್ರಮವಾಗಿ 0.25 ಪೈಸೆ ಮತ್ತು 0.10 ಪೈಸೆಯಂತೆ ಹಾಗೂ ವೃತ್ತಿ ತೆರಿಗೆ, ವಿಲಾಸ ತೆರಿಗೆ ಮತ್ತು ಜೂಜು ತೆರಿಗೆ ಮೇಲೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಶೇ. 5 ರಷ್ಟು ಬಿ.ಎಂ. ಆರ್. ಟಿ.ಸೆಸ್ ಸಂಗ್ರಹಿಸಲಾಗಿತ್ತು.

ಇ) ದಿನಾಂಕ 1.4. 1995 ರಿಂದ 31.3. 1998 ರವರೆಗೆ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸಂಗ್ರಹಿಸಿದ ಸೆಸ್ ಹಾಗೂ ವೃತ್ತಿ ತೆರಿಗೆ, ವಿಲಾಸ ತೆರಿಗೆ, ಜೂಜು ತೆರಿಗೆ ಇವುಗಳ ಮೇಲೆ ಸಂಗ್ರಹಿಸಿದ ಸೆಸ್ ಈ ಕೆಳಕಂಡಂತೆ ಇರುತ್ತದೆ.

(ರೂ. ಕೋಟಿಗಳಲ್ಲಿ)

ವರ್ಷ	ಪೆಟ್ರೋಲ್ ಮತ್ತು ಡೀಸೆಲ್	ಮೇಲ್ಕಂಡಂತೆ ಇತರೆ ಬಾಬು ಸೇರಿ ಒಟ್ಟು
95-96	31.20	47.13
96-97	30.20	45.30
97-98	31.68	50.16
ಒಟ್ಟು		**142.59**

ಈ ಹಣವನ್ನು ಈ ಕೆಳಕಂಡ ಸಂಸ್ಥೆಗಳಲ್ಲಿ ಇಡಲಾಗಿರುತ್ತದೆ.

ಕರ್ನಾಟಕ ಗೃಹ ಮಂಡಲಿ	ರೂ. 32.47
ಕೆ. ಐ. ಜೆ. ಎನ್. ಎಲ್. ಬಾಂಡ್	ರೂ. 72.53
ಬ್ಯಾಂಕ್‌ಗಳಲ್ಲಿ	ರೂ. 37.59
ಒಟ್ಟು	**ರೂ. 142.59**

ದಿನಾಂಕ 1.4.98 ರಿಂದ ಸಂಗ್ರಹಿಸಿರುವ ಮೂಲಭೂತ ಅಭಿವೃದ್ಧಿ ಸೆಸ್ ವಿವರ ಈ ಕೆಳಕಂಡಂತೆ ಇರುತ್ತದೆ.

98-99	ರೂ. 121.85
99-2000	ರೂ. 148.27
ಒಟ್ಟು	**270.12**

ಮೂಲಭೂತ ಅಭಿವೃದ್ಧಿ ಸೆಸ್ ಇದರಡಿ ಸಂಗ್ರಹಿಸಿರುವ ಹಣವನ್ನು ಮೂಲಭೂತ ಅಭಿವೃದ್ಧಿ ಸೆಸ್ ನಿಧಿಯಲ್ಲಿ ಜಮೆ ಮಾಡಲಾಗಿದ್ದು ಈ ಹಣವು ಸರ್ಕಾರದಲ್ಲಿ ಇರುತ್ತದೆ.

ಈ) ಈ ಯೋಜನೆಯ ಕಾರ್ಯ ಸಾಧ್ಯತೆ ಬಗ್ಗೆ ಅಧ್ಯಯನಗಳು ನಡೆಸಲಾಗುತ್ತಿದ್ದು ತದನಂತರ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಬೆಂಗಳೂರು ನಗರದಲ್ಲಿ ಗಂಟೆ ಗಾಡಿಗಳ ಮೂಲಕ ಕಸ ಸಂಗ್ರಹಣೆ

1205 (1218) ಶ್ರೀ ದಿನೇಶ್ ಗುಂಡೂರಾವ್ ಗಾಂಧಿನಗರ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಗಂಟೆ ಗಾಡಿಗಳ ಮೂಲಕ ಕಸ ಎತ್ತುವ ಪದ್ಧತಿಯನ್ನು ಎಷ್ಟು ವಿಭಾಗ (ವಾರ್ಡ್) ಗಳಲ್ಲಿ ಜಾರಿಗೊಳಿಸಲಾಗಿದೆ?

ಆ) ಈ ಗಾಡಿಗಳಲ್ಲಿ ಸಂಗ್ರಹಿಸಲು ಅನುಕೂಲವಾಗುವಂತೆ ಪರಿಸರಕ್ಕೆ ಹಾನಿಯುಂಟು ಮಾಡುವ ಪ್ಲಾಸ್ಟಿಕ್, ಗಾಜು ಹಾಗೂ ಪರಿಸರಕ್ಕೆ ಹಾನಿಕಾರಕವಲ್ಲದ ವಸ್ತುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸುವ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ, ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆಯೇ?

ಈ) ಗಂಟೆ ಗಾಡಿಗಳಲ್ಲಿ ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿರುವ (ಹಾನಿಕಾರಕ-ಹಾನಿಕಾರಕವಲ್ಲದ) ಕಸವನ್ನು ನಂತರ ಪಾಲಿಕೆ ಸಿಬ್ಬಂದಿ ಒಟ್ಟಿಗೆ ಮಿಶ್ರಣ ಮಾಡಿ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು)

ಅ) 112.

ಆ) ಹೌದು.

ಇ) ಹೌದು.

ಈ) ಹೌದು

ಒಂದು ಆರೋಗ್ಯ ವಾರ್ಡಿಗೆ ಒಂದೇ ವಾಹನದ ವ್ಯವಸ್ಥೆ ಇರುವುದರಿಂದ, ಸಂಗ್ರಹಿಸಿದ ಕಸವನ್ನು ಒಟ್ಟಿಗೆ ಸಾಗಿಸುತ್ತಿರುವುದು ಗಮನಕ್ಕೆ ಬಂದಿದೆ.

ಜಾರಾದ ತಾಲ್ಲೂಕಿನಲ್ಲಿ ಅಗ್ನಿಶಾಮಕದಳ ಕಛೇರಿ ಸ್ಥಾಪನೆ

1206 (1706) ಶ್ರೀ ಗುಂಡಪ್ಪ ವಕೀಲ್ (ಔರಾದ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?